## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 210 |
| ಸದಸ್ಯರ ಹೆಸರು | : ಶ್ರೀ.ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 12.08.2025 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 5 ವರ್ಷದಿಂದ ರಾಜ್ಯದಲ್ಲಿ ಎಷ್ಟು ತೆಂಗು ಬೆಳೆ ಉತ್ಪಾದನೆ ಆಗಿದೆ: (ವರ್ಷವಾರು ವಿವರ ಒದಗಿಸುವುದು)</td><td>ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಉತ್ಪಾದನೆಯಾದ ತೆಂಗು ಬೆಳೆಯ ವಿವರ ಕೆಳಗಿನಂತಿದೆ.
<table>
<tr><th>ಕ್ರ. ಸಂ</th><th>ವರ್ಷ</th><th>ವಿಸ್ತೀರ್ಣ(ಲಕ್ಷ ಹೆಕ್ಟೇರ್ ಗಳಲ್ಲಿ)</th><th>ಉತ್ಪಾದನೆ (ಮೆಟ್ರಿಕ್ ಟನ್ ಗಳಲ್ಲಿ)</th></tr>
<tr><td>1.</td><td>2019-20</td><td>6.24</td><td>22.06</td></tr>
<tr><td>2.</td><td>2020-21</td><td>6.47</td><td>26.45</td></tr>
<tr><td>3.</td><td>2021-22</td><td>5.96</td><td>24.23</td></tr>
<tr><td>4.</td><td>2022-23</td><td>7.04</td><td>34.79</td></tr>
<tr><td>5.</td><td>2023-24</td><td>5.65</td><td>24.76</td></tr>
</table></td></tr>
<tr><td>ಆ)</td><td>ಇತ್ತೀಚಿನ ವರ್ಷಗಳಲ್ಲಿ ತೆಂಗಿನ ಬೆಳೆಯ ಇಳುವರಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದಕ್ಕೆ ಕಾರಣಗಳನ್ನು ಹುಡುಕಲು ವೈಜ್ಞಾನಿಕವಾಗಿ ಅಧ್ಯಯನ ನಡೆಸಲಾಗಿದೆಯೇ; ಹಾಗೂ ಯಾವ ಯಾವ ಕಾರಣಗಳನ್ನು ಗುರುತಿಸಲಾಗಿದೆ: (ವಿವರ ಒದಗಿಸುವುದು).</td><td>ಸರ್ಕಾರದ ಗಮನಕ್ಕೆ ಬಂದಿದೆ.<br>ದಿನಾಂಕ:31.07.2025 ಹಾಗೂ 01.08.2025 ರಂದು ತಜ್ಞರು, CPCRI, ಕಾಸರಗೋಡು ರವರು ತುಮಕೂರು, ತಿಪಟೂರು ಹಾಗೂ ಅರಸಿಕೆರೆ ಪ್ರದೇಶಗಳಲ್ಲಿ ಕೀಟ/ರೋಗ ಬಾಧಿತ ಪ್ರದೇಶಗಳನ್ನು ಭೇಟಿ ನೀಡಿ ಇಳುವರಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದರ ಕುರಿತು ಈ ಕೆಳಗಿನಂತೆ ಅಂಶಗಳನ್ನು ತಿಳಿಸಿರುತ್ತಾರೆ.<br>1.ಸದರಿ ಪ್ರದೇಶಗಳಲ್ಲಿ ಪೋಟ್ಯಾಶ್ ಗೊಬ್ಬರದ ಕೊರತೆಯಿರುತ್ತದೆ.<br>2.ಕಳೆದ ಸಾಲಿನಲ್ಲಿ ಹೆಚ್ಚಿನ ತಾಪ, ಕಡಿಮೆ ಆದ್ರತೆ ಹಾಗೂ ಮಳೆಯಿಂದ ಗರಿಗಳು ಸುಟ್ಟ ಬಣ್ಣಕ್ಕೆ ತಿರುಗಿ ಒಣಗಿದಂತಾಗಿರುತ್ತವೆ.<br>3.ರಾಸಾಯನಿಕ ಗೊಬ್ಬರಗಳನ್ನು ನೀಡಿರುವುದಿಲ್ಲ ಹಾಗೂ ಪ್ರವಾಹ ನೀರಾವರಿ ವಿಧಾನವನ್ನು ಅನುಸರಿಸುವಿಕೆ.<br>4.ತಿಪಟೂರು ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ಕಾಂಡ ಕೊಳೆತ, ಕಾಂಡ ಸೋರುವ ಮತ್ತು ಕಪ್ಪು ತಲೆ</td></tr>
</table>

| | | |
|---|---|---|
| | | ಹುಳುವಿನ ಬಾಧೆ ಕಂಡುಬಂದಿವೆ ಆದರೆ ಸಮೀಕ್ಷೆ ಮಾಡಿದ ಎಲ್ಲಾ ಪ್ರದೇಶಗಳಲ್ಲಿ ಬಿಳಿ ನೊಣದ ಬಾಧೆ ಕಂಡುಬಂದಿರುತ್ತದೆ.<br>**ಇದರ ನಿಯಂತ್ರಣೆಗೆ ಈ ಕೆಳಗಿನಂತೆ ಶಿಫಾರಸ್ಸು ನೀಡಲಾಗಿರುತ್ತದೆ.**<br>1.ಮಣ್ಣಿನ ಪರೀಕ್ಷೆ ಆಧಾರಿತ ವ್ಯವಸ್ಥಿತ ಪೋಷಕಾಂಶಗಳ ಬಳಕೆ, ವಿಶೇಷವಾಗಿ ಪೊಟ್ಯಾಸಿಯಮ್ ಗೊಬ್ಬರ ಮತ್ತು ಅಗತ್ಯ ಆಧಾರಿತ ಸೂಕ್ಷ್ಮ ಪೋಷಕಾಂಶಗಳು, ತೆಂಗು ಮರಗಳ ಆರೋಗ್ಯವನ್ನು ಸುಧಾರಿಸುವುದು.<br>2.ಕಪ್ಪು ತಲೆ ಹುಳುಗಳ ನಿರಂತರ ನಿರ್ವಹಣೆಗಾಗಿ ಹಂತ-ಹಂತವಾಗಿ ಗೋನಿಯೋಜಸ್ ಪರೋಪ ಜೀವಿಗಳನ್ನು ಉತ್ಪಾದಿಸಿ ತೆಂಗು ಮರಗಳಿಗೆ ಬಿಡುಗಡೆಗೊಳಿಸುವುದು.<br>3. ಕೀಟಗಳ ಅವಶೇಷಗಳ ನಾಶಕ್ಕಾಗಿ ಎಲೆಗಳ ಒಣಗಿದ ಹೊರ ಸುರುಳಿಗಳನ್ನು ತೆಗೆಯುವುದು ಮತ್ತು ಸುಳಿಯನ್ನು ಸ್ವಚ್ಛಗೊಳಿಸುವುದು<br>4.ಸ್ಥಳೀಯ ತೋಟಗಳಲ್ಲಿ ಪರಾವಲಂಬಿ ಕಡಿಮೆ ಇದ್ದರೆ ಬೇವಿನ ಎಣ್ಣೆ (0.5%) ಅಥವಾ ಸಿಂಪ್ಲಿಸಿಲಿಯಮ್ ಲ್ಯಾನೋಸೋನಿವಿಯಂ ಸಿಂಪಡಿಸುವುದು<br>5.ಹೆಕ್ಸಾಕೊನಜೋಲ್‌ನೊಂದಿಗೆ ಆರಂಭಿಕ ಚಿಕಿತ್ಸೆಯ ನಂತರ ಬೇವಿನ ಹಿಂಡಿನಿಂದ ಬಲಪಡಿಸಿದ ಟ್ರೈಕೋಡರ್ಮಾ ಆಧಾರಿತ ಜೈವಿಕ-ನಿಯಂತ್ರಕಗಳ ಮಿಶ್ರಗೊಬ್ಬರದ ಮೂಲಕ ಕಾಂಡ ಕೊಳೆತ ಮತ್ತು ಕಾಂಡ ಸೋರುವ ರೋಗದ ನಿರ್ವಹಣೆ ಕೈಗೊಳ್ಳುವುದು.<br>6.ವರ್ಷಕ್ಕೆ 15 ಕಾಯಿಗಳಿಗಿಂತ ಕಡಿಮೆ ಇಳುವರಿ ನೀಡುವ ತೆಂಗು ಮರಗಳನ್ನು ತೆಗೆದು ಹಾಕುವುದು.<br>7.ರೈತರಿಗೆ ನಿರಂತರ ಆದಾಯವನ್ನು ನೀಡುವ ವೈವಿಧ್ಯಕರ ಬೆಳೆಗಳನ್ನು ಬೆಳೆಯುವುದು. |
| ಇ) | ತೆಂಗು ಬೆಳೆ ಇಳುವರಿ ಹೆಚ್ಚಿಸಲು ಸರ್ಕಾರದಿಂದ ರೈತರಿಗೆ ಯಾವ ಯಾವ ಪರಿಹಾರ ಕ್ರಮಗಳನ್ನು ಸೂಚಿಸಲಾಗಿದೆ: ಹಾಗೂ ರೈತರಿಗೆ ಯಾವ ರೀತಿ ನೆರವು ನೀಡಲಾಗಿದೆ? (ವಿವರ ಒದಗಿಸುವುದು). | ತೆಂಗು ಬೆಳೆಯ ಇಳುವರಿ ಹೆಚ್ಚಿಸಲು ಇಲಾಖೆಯಿಂದ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿವೆ.<br>1. ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನ ತೋಟಗಳ ಪುನ:ಶ್ಚೇತನ, ಮರುನಾಟಿ ಮತ್ತು ನಿರ್ವಹಣೆಗಾಗಿ ಪ್ರತಿ ಫಲಾನುಭವಿಗೆ ಒಂದು ಹೆಕ್ಟೇರ್ ವರೆಗೆ ರೂ. 54,000/- ಗಳನ್ನು ನೀಡಲಾಗುತ್ತಿದೆ. ಮೊದಲನೇ ವರ್ಷ ರೂ.45,250/- ಗಳನ್ನು ಹಾಗೂ ಎರಡನೇ ವರ್ಷದ ನಿರ್ವಹಣೆಗೆ ರೂ.8,750/ ಗಳ |

| | | |
|---|---|---|
| | | ಸಹಾಯಧನವನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಹೊಸ ಕಾರ್ಯಕ್ರಮಕ್ಕೆ ರೂ. 452.50 ಲಕ್ಷಗಳ ಅನುದಾನ ನಿಗದಿಯಾಗಿರುತ್ತದೆ ಹಾಗೂ ನಿರ್ವಹಣೆ ಕಾರ್ಯಕ್ರಮಕ್ಕೆ ರೂ. 186.04 ಲಕ್ಷಗಳು ಬಿಡುಗಡೆಯಾಗಿದೆ.<br><br>2. ರೈತರ ತಾಕುಗಳಲ್ಲಿ ಪ್ರಾತ್ಯಕ್ಷತೆ ಹಾಗೂ ನಿರ್ವಹಣೆ ಕೈಗೊಳ್ಳಲು ಒಂದು ಹೆಕ್ಟೇರ್ ಗೆ ರೂ. 35,000/- ಗಳನ್ನು 2 ವರ್ಷಗಳ ಅವಧಿಗೆ ಮೊದಲನೇ ವರ್ಷ ರೂ.17,500/- ಗಳು ಮತ್ತು ಎರಡನೇ ವರ್ಷ ರೂ.17,500/- ರಂತೆ ಸಹಾಯಧನ ನೀಡಲಾಗುತ್ತಿದೆ. ರೋಗ ಮತ್ತು ಕೀಟಬಾಧಿತ ತಾಕುಗಳನ್ನು ಗುಚ್ಛಗಳಲ್ಲಿ ಆಯ್ಕೆ ಮಾಡಿ 2024-25 ನೇ ಸಾಲಿನಲ್ಲಿ ರೂ1,058.19 ಲಕ್ಷಗಳ ಅನುದಾನಕ್ಕೆ 6,047 ಹೆಕ್ಟೇರ್ ಪ್ರದೇಶದಲ್ಲಿ 9735 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 4,973.45/- ಲಕ್ಷಗಳ ಅನುದಾನಕ್ಕೆ ನಿಗದಿಯಾಗಿದೆ.<br>3.ತೆಂಗಿನ ಬೆಳೆಯಲ್ಲಿ ಕಂಡುಬರುವ ರೋಗ/ಕೀಟಗಳ ಹತೋಟಿ ಕ್ರಮಗಳ ಕುರಿತು ಅರಿವು ಮೂಡಿಸಲು ವಿಷಯ ತಜ್ಞರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ತಜ್ಞರು, ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (CPCRI), ಕಾಸರಗೋಡು ಹಾಗೂ ತೆಂಗು ಅಭಿವೃದ್ಧಿ ಮಂಡಳಿಯ ಅಧಿಕಾರಿಗಳ ಸಹಯೋಗದೊಂದಿಗೆ 12,500 ರೈತರಿಗೆ 85 ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ.<br>4.ಕಪ್ಪು ತಲೆ ಹುಳು ಹಾಗೂ ಬಿಳಿನೊಣ ಕೀಟಗಳ ನಿಯಂತ್ರಣಕ್ಕಾಗಿ ಇಲಾಖೆಯ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ 23 ಇಲಾಖಾ ಪ್ರಯೋಗ ಶಾಲೆಗಳಲ್ಲಿ ಗೋನಿಯೋಜಸ್ ಪರೋಪಜೀವಿಗಳು ಹಾಗೂ ಐಸಿರಿಯಾ ಶಿಲೀಂದ್ರ ನಾಶಕವನ್ನು ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲಾಗುತ್ತಿದೆ. 2024-25 ನೇ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನಕ್ಕೆ 328.44 ಲಕ್ಷ ಸಂಖ್ಯೆಯ ಪರೋಪ ಜೀವಿಗಳನ್ನು ಉತ್ಪಾದಿಸಿ 6969 ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 140.00 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಪರೋಪ ಜೀವಿಗಳನ್ನು ಹಾಗೂ ಐಸಿರಿಯಾ ಶಿಲೀಂದ್ರ ನಾಶಕವನ್ನು ಉತ್ಪಾದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ. |

| | | |
|---|---|---|
| | | 5.ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಗಾಗಿ ಪ್ರತಿ ಹೆಕ್ಟೇರಿಗೆ ತಗಲುವ ಘಟಕ ವೆಚ್ಚದ ಶೇ.75ರಂತೆ ಸಾಮಾನ್ಯ ವರ್ಗದ ರೈತರಿಗೆ ರೂ.7,500/-ಗಳನ್ನು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಂತೆ ರೂ.9,000/-ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 340.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.<br>6.ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ತೆಂಗು ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ ರೂ.1,500/- ರಂತೆ 2ಹೆಕ್ಟೇರ್ ರವರೆಗೆ ಗರಿಷ್ಠ ರೂ.3,000/-ಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 525.00 ಲಕ್ಷಗಳ ಅನುದಾನ ನಿಗದಿಪಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.<br>7. ಕಪ್ಪು ತಲೆ ಹುಳು ಹಾಗೂ ಬಿಳಿ ನೊಣ ಬಾಧೆಯ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಲು ಮೊಬೈಲ್ App ಸಿದ್ಧಪಡಿಸಲಾಗಿದ್ದು, ಸಮೀಕ್ಷೆ ನಡೆಸಲು ಕ್ರಮಕೈಗೊಳ್ಳಲಾಗುತ್ತಿದೆ.<br>8.ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಇಲಾಖಾ ಪ್ರಯೋಗಶಾಲೆಗಳಲ್ಲಿ ಗೋನಿಯೋಜಸ್ ಪರೋಪ ಜೀವಿಗಳ ಉತ್ಪಾದನೆ ಮಾಡಿ ಉಚಿತವಾಗಿ ವಿತರಿಸಲು ರೂ.50.00/- ಲಕ್ಷಗಳ ಅನುದಾನ ನೀಡುವಂತೆ ತೆಂಗು ಅಭಿವೃದ್ಧಿ ಮಂಡಳಿ, ಕೊಚ್ಚಿ, ಕೇರಳ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |

HORTI 345 HGM 2025

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು